ಇ) ಹೌದು.

ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಬಗ್ಗೆ

676 -ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆ ಎಷ್ಟು ಹಾಗೂ ಸರ್ಕಾರ ನಾಮನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ ಎಷ್ಟು?*

ಆ) *ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಸರ್ಕಾರ ಸದಸ್ಯರನ್ನು ನಾಮನಿರ್ದೇಶನ ಮಾಡಿರುವುದು ನಿಜವೇ?*

ಇ) *ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಕಂಡ ಕಾರ್ಖಾನೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ ಇದ್ದ ರಿಟ್ ಪೆಟಿಷನ್ ಹಾಗೂ ರಿಟ್ ಅಫೀಲ್‌ಗಳಲ್ಲಿ ಈ ವರೆಗೆ ಆಗಿರುವ ಆದೇಶಗಳೇನು, ಹಾಗೂ ಸರ್ಕಾರ ನ್ಯಾಯಾಲಯದ ಆದೇಶಗಳನ್ನು ಪಾಲಿಸಿದೆಯೇ (ಆದರ ವಿವರ ನೀಡಿ)?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಚುನಾಯಿತ ಸದಸ್ಯರ ಸಂಖ್ಯೆ 18 ಸರ್ಕಾರದ ನಾಮ ನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ 11.

ಆ) ಇಲ್ಲ.

ಇ) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 3517:94 ರಲ್ಲಿ ದಿನಾಂಕ 11-2-94ರಂದು ಸರ್ಕಾರವು ಒಟ್ಟು ಸದಸ್ಯರ $\frac{1}{3}$ ಕ್ಕಿಂತ ಹೆಚ್ಚಿಗೆ ನಾಮ ನಿರ್ದೇಶನ ಮಾಡಬಾರದೆಂದು ಮಧ್ಯಂತರ ಆದೇಶ ನೀಡಿದೆ ಮತ್ತು ರಿಟ್ ಅರ್ಜಿ ಸಂಖ್ಯೆ 4245:94ರಲ್ಲಿ ದಿನಾಂಕ 16-2-94ರಂದು ಆಡಳಿತ ಮಂಡಳಿಯು ಪ್ರಥಮ ಸಭೆ ಹಾಗೂ ಚುನಾವಣೆಯನ್ನು ಕಾನೂನಿನ ಪ್ರಕಾರ ನಡೆಸುವಂತೆ ಹಾಗೂ ಕೇವಲ 6 ಮಂದಿ ನಾಮ ನಿರ್ದೇಶಿತ ಸದಸ್ಯರು ಮಾತ್ರ ಆದರಲ್ಲಿ ಭಾಗವಹಿಸುವಂತೆ ಮಧ್ಯಂತರ ಆದೇಶ ನೀಡಿದೆ. ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಫೀಲ್ ಸಂಖ್ಯೆ ಜಿಲಂ ಮತ್ತು 581:94 (ಸಿಎಸ್)ಗಳಲ್ಲಿ ದಿನಾಂಕ 3-3-94 ರಂದು ಮಧ್ಯಂತರ ಆದೇಶ ನೀಡಿ ಮೇಲ್ಕಂಡ ರಿಟ್ ಅರ್ಜಿಗಳ ಎರಡೂ ಮಧ್ಯಂತರ ಆದೇಶಗಳಿಗೆ ತಡೆಯಾಜ್ಞೆ ನೀಡಿ ಆಡಳಿತ ಪದಾಧಿಕಾರಿಗಳ ಚುನಾವಣೆಯನ್ನು ಮುಂದೂಡಿರುತ್ತದೆ. ರಿಟ್ ಅರ್ಜಿ ಹಾಗೂ ರಿಟ್ ಅಫೀಲುಗಳು ಇನ್ನೂ ಅಂತಿಮವಾಗಿ ಇತ್ಯರ್ಥವಾಗಿಲ್ಲ.

ಕಡಂದಲೆ ವಿದ್ಯಾರ್ಥಿ ನಿಲಯ ಕುರಿತು

565-ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಡಂದಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿದ್ದು ತುಂಬಾ ತೊಂದರೆ ಉಂಟಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅಲ್ಲಿಗೆ ಸ್ಥಳದ ಮಂಜೂರಾಗಿದೆಯೇ?*

ಇ) *ಸರ್ಕಾರವು ಆ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ರಚಿಸಲು ಏನು ಕ್ರಮ ಕೈಗೊಂಡಿದೆ?*